NOVEMBER 16, 2024

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ವನವಾಸಿ ಬಂಧುಗಳಿಗೆ, ಗ್ರಿಡ್ ಮೂಲಕ, ಸೌರ ವಿದ್ಯುತ್ ವ್ಯವಸ್ಥೆ – ಎಚ್.ಡಿ. ಕುಮಾರಸ್ವಾಮಿ.
- ವಿಶೇ ʼ ಚೇತನ ಮಕ್ಕಳಿಗೆ, ಪ್ರವೇಶ ಪರೀಕ್ಷೆ ನಡೆಸದೇ, 6ನೇ ತರಗತಿಗೆ ದಾಖಲಾತಿ ನೀಡಲು, ಸೂಚನೆ – ದಾಸ್ ಸೂರ್ಯವಂಶಿ.
- ರಾಜ್ಯ ಲೋಕಾಯುಕ್ತದಲ್ಲಿ, 20 ಸಾವಿರ ಪ್ರಕರಣಗಳ ವಿಚಾರಣೆ ಬಾಕಿ – ನ್ಯಾಯಮೂರ್ತಿ ಬಿ. ವೀರಪ್ಪ.
- "ಬದಲಾಗುತ್ತಿರುವ ಪತ್ರಿಕಾ ಮಾಧ್ಯಮದ ಸ್ವರೂಪ", ವಿಷಯದಡಿ, ಇಂದು ರಾಷ್ಟ್ರೀಯ ಪತ್ರಿಕಾ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ವನವಾಸಿ ಬಂಧುಗಳಿಗೆ, ಗ್ರಿಡ್ ಮೂಲಕ, ಸೌರ ವಿದ್ಯುತ್ ವ್ಯವಸ್ಥೆ, ಆಹಾರ ಪದಾರ್ಥದಲ್ಲಿ ಯುಕ್ತ ಪೌಷ್ಟಿಕಾಂಶ ಒದಗಿಸಿ, ಉತ್ತಮ ಬದುಕು ಕಟ್ಟಿಕೊಡುವ ಆಶಯವನ್ನು, ಪ್ರಧಾನಮಂತ್ರಿ ನರೇಂದ್ರ ಮೋದಿ ಹೊಂದಿದ್ದಾರೆ ಎಂದು, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ. ಮೈಸೂರಿನ ಕೇರ್ಗಳ್ಳಿಯ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನೆ ಸಂಸ್ಥೆಯಲ್ಲಿ, ಭಗವಾನ್ ಬಿರ್ಸಾ ಮುಂಡಾ ಜಯಂತಿ ಅಂಗವಾಗಿ, ಜನ ಜಾತಿಯ ಗೌರವ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಮಾತನಾಡಿದರು. ವನವಾಸಿ ಸಮುದಾಯದ ಹೆಣ್ಣುಮಕ್ಕಳು ವಿದ್ಯಾವಂತರಾಗಬೇಕು. ಯುವಕರು ಕೌಶಲಗಳಿಸಿ, ಬದುಕು ಕಟ್ಟಿಕೊಳ್ಳಬೇಕು, ಎಂದರು.

<><><>

ಪ್ರಧಾನಮಂತ್ರಿಯವರೊಂದಿಗೆ, ವಿವಿಧ ಯೋಜನೆಗಳ ಆದಿವಾಸಿ ಫಲಾನುಭವಿಗಳ ಜೊತೆ, ಸಚಿವ ಕುಮಾರಸ್ವಾಮಿ ಹಾಗೂ ಶೋಭಾ ಕರಂದ್ಲಾಜೆ ಅವರು, ಸಂವಾದ ನಡೆಸಿದರು.

<><><>

ರಾಜ್ಯದ 900 ವಸತಿ ಶಾಲೆಗಳಲ್ಲಿ, ವಿಶೇಷ ಚೇತನ ಮಕ್ಕಳಿಗೆ, ಪ್ರವೇಶ ಪರೀಕ್ಷೆ ನಡೆಸದೇ, 6ನೇ ತರಗತಿಗೆ ದಾಖಲಾತಿ ನೀಡಲು, ಸುತ್ತೋಲೆ ಹೊರಡಿಸಲಾಗಿದೆ ಎಂದು, ರಾಜ್ಯ ವಿಕಲಚೇತನ ಹಕ್ಕುಗಳ ಅಧಿನಿಯಮದ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ ತಿಳಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ, ವಿಶಿಷ್ಟಚೇತನರ ಪುನರ್ವಸತಿ ಕೇಂದ್ರದ ವತಿಯಿಂದ, ದೊಡ್ಡಬಳ್ಳಾಪುರದಲ್ಲಿ ನಡೆದ, ವಿಶೇಷ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು, ಮಾತನಾಡಿದರು. ಆರೋಗ್ಯ ಇಲಾಖೆಯ, ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ, ಪ್ರತಿ ವರ್ಷ 25 ಸಾವಿರ ವಿಶೇಷಚೇತನ ಮಕ್ಕಳು, ಆರೋಗ್ಯ ಮತ್ತು ಮುಖ್ಯವಾಹಿನಿಯ ಶಿಕ್ಷಣದ ಸದುಪಯೋಗ ಪಡೆಯುತ್ತಿದ್ದಾರೆ, ಎಂದರು.

<><><>

ರಾಜ್ಯ ಲೋಕಾಯುಕ್ತದಲ್ಲಿ, 20 ಸಾವಿರ ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ. ಅಧಿಕಾಂಶ ಸುಳ್ಳು ದೂರುಗಳ ವಿಚಾರಣೆಯಲ್ಲೇ ಹೆಚ್ಚು ಸಮಯ ವ್ಯಯವಾಗುತ್ತಿದೆ. ನೈಜ ಪ್ರಕರಣಗಳ ವಿಚಾರಣೆಗೆ, ಅನಗತ್ಯ ವಿಳಂಬವಾಗುತ್ತಿದೆ ಎಂದು, ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಹೇಳಿದ್ದಾರೆ. ಕಲಬುರಗಿಯ, ಡಾಕ್ಟರ್ ಎಸ್.ಎಂ. ಪಂಡಿತ ರಂಗಮಂದಿರದಲ್ಲಿ, ಸಾರ್ವಜನಿಕರಿಂದ ಅಹವಾಲು ಆಲಿಸಿ, ಅವರು ಮಾತನಾಡಿದರು. ಅಂದಾಜು 7 ಸಾವಿರ ಸುಳ್ಳು ಪ್ರಕರಣಗಳನ್ನು ಸರ್ಕಾರಿ ಅಧಿಕಾರಿಗಳ ಮೇಲೆ ದಾಖಲಿಸಿ, ನೈತಿಕತೆ ಕುಂದಿಸುವ ಕೆಲಸ ನಡೆದಿದೆ. ಸುಳ್ಳು ಪ್ರಕರಣ ದಾಖಲಿಸುವವರಿಗೆ ಮೂರು ವರ್ಷಗಳ ಜೈಲು ಶಿಕ್ಷೆ ಕಾಯ್ದಿದೆ ಎಂದರು.

<><><>

ಹುಬ್ಬಳ್ಳಿ–ಧಾರವಾಡದ ಮಧ್ಯೆ, ಲೈಟ್ ರೇಲ್ ಟ್ರಾನ್ಸಿಟ್ – ಎಲ್.ಆರ್.ಟಿ. ಯೋಜನೆ ರೂಪಿಸಲು, ಚಿಂತನೆ ನಡೆದಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ತಿಳಿಸಿದ್ದಾರೆ. ಹುಬ್ಬಳ್ಳಿಯ ನಿರೀಕ್ಷಣಾ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಸರ್ವ ಸೌಲಭ್ಯ ನಗರಿ–ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳ ಗುಣಮಟ್ಟವನ್ನು ಪರಿಶೀಲಿಸಿ, ಸರ್ಕಾರದ ಸುಪರ್ದಿಗೆ ವಹಿಸಿಕೊಳ್ಳುವ ಮುನ್ನ, ಅಧಿಕಾರಿಗಳೊಂದಿಗೆ ಮತ್ತೊಮ್ಮೆ ಸಭೆ ನಡೆಸಿ, ನಿರ್ಣಯಿಸುವುದಾಗಿ ತಿಳಿಸಿದರು.

<><><>

ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು, ಸರ್ಕಾರ, ಲಾಭದ ದೃಷ್ಟಿಯಿಂದ ನಡೆಸುವ ಉಪಕ್ರಮವಲ್ಲ. ಅದು ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಹಾಗೂ ರಾಜ್ಯದ ಪ್ರಯಾಣಿಕರಿಗೆ ಕಡಿಮೆ ವೆಚ್ಚದಲ್ಲಿ ಪ್ರವಾಸ ಸಾಧ್ಯವಾಗಿಸಲು, ಯೋಜಿಸಬೇಕಾದ ವ್ಯವಸ್ಥೆ ಎಂದು, ಸಾರಿಗೆ ಖಾತೆ ಸಚಿವ ರಾಮಲಿಂಗಾರೆಡ್ಡಿ ಅಭಿಪ್ರಾಯಪಟ್ಟಿದ್ದಾರೆ. ಹುಬ್ಬಳ್ಳಿಯಲ್ಲಿ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ, 127 ನೂತನ ಬಸ್‌ಗಳನ್ನು ಲೋಕಾರ್ಪಣೆ ಮಾಡಿ, ಸುದ್ದಿಗಾರರೊಂದಿಗೆ ಮಾತನಾಡಿದರು.

<><><>

ಇದೇ 19 ರಿಂದ 21ರ ವರೆಗೆ, ಬೆಂಗಳೂರಿನ ಅರಮನೆ ಮೈದಾನದಲ್ಲಿ, ಬೆಂಗಳೂರು ಟೆಕ್ ಸಮ್ಮಿಟ್, ಬಿ.ಟಿ.ಎಸ್. – 2024ಅನ್ನು, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಆಯೋಜಿಸಿದೆ ಎಂದು, ಐ.ಟಿ. ಬಿ.ಟಿ. ಖಾತೆ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ತಮ್ಮ ಫೇಸ್‌ಬುಕ್ ಪುಟದಲ್ಲಿ ಈ ಮಾಹಿತಿ ನೀಡಿರುವ ಸಚಿವರು, 118 ಸ್ಟಾರ್ಟಅಪ್‌ಗಳು ಹಾಗೂ 50 ಜಾಗತಿಕ ಹೂಡಿಕೆದಾರರನ್ನು, ಒಂದೇ ವೇದಿಕೆಯಡಿ ತರುವ ಪ್ರಯತ್ನ ಇದಾಗಿದೆ. ಆಸ್ಟ್ರೇಲಿಯಾ, ಯು.ಕೆ., ಫ್ರಾನ್ಸ್, ಆಸ್ಟ್ರಿಯಾ, ಯುರೋಪಿಯನ್ ಯೂನಿಯನ್, ಡೆನ್ಮಾರ್ಕ್ ಸೇರಿದಂತೆ 50ಕ್ಕೂ ಹೆಚ್ಚು ಜಾಗತಿಕ ನಿಯೋಗ ಭಾಗಿಯಾಗಲಿವೆ, ಎಂದಿದ್ದಾರೆ.

<><><>

ಮಂಗಳೂರಿನ ಯುವ ಉಪನ್ಯಾಸಕಿ, ಗ್ಲೋರಿಯಾ ರೋಡ್ರಿಗಸ್, ಆಹಾರ ಅಲರ್ಜಿ ಹಿನ್ನೆಲೆ, ಅಪರೂಪದ ಕಾಯಿಲೆಯಿಂದ ಮೃತಪಟ್ಟಿದ್ದು, ತಮ್ಮ ದೇಹದ ಅಂಗಾಂಗಗಳನ್ನು ದಾನ ಮಾಡಿ, ಹಲವರಿಗೆ ಜೀವದಾತೆಯಾಗಿದ್ದಾರೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ, ಶ್ಲಾಘಿಸಿದ್ದಾರೆ.

ಗ್ಲೋರಿಯಾ ಅವರು ತಮ್ಮ ಕಣ್ಣು, ಹೃದಯ, ಯಕೃತ್, ಕಿಡ್ನಿ, ಶ್ವಾಸಕೋಶ ಮತ್ತು ಚರ್ಮವನ್ನು ದಾನ ಮಾಡಿದ್ದಾರೆ. ನೋವಿನಲ್ಲಿಯೂ ಸಾರ್ಥಕತೆ ಮೆರೆದ ಅವರ ಕುಟುಂಬಸ್ಥರಿಗೆ, ಅವರು ಧನ್ಯವಾದ ಸಲ್ಲಿಸಿದ್ದಾರೆ. 'ಅಂಗಾಂಗ ದಾನದ ಪ್ರತಿಜ್ಞೆ ಕೈಗೊಳ್ಳಿ; ಇನ್ನೊಬ್ಬರ ಬದುಕಿಗೆ ಬೆಳಕಾಗಿ' ಎಂದು ಸಚಿವ ದಿನೇಶ, ಎಕ್ಸ್ ಜಾಲತಾಣದ ಮೂಲಕ ಮನವಿ ಮಾಡಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕೇಂದ್ರದ ಜೈವಿಕ ತಂತ್ರಜ್ಞಾನ ಇಲಾಖೆಯ ನಿರ್ದೇಶನದಡಿ, ಮಂಡ್ಯದ ವಿ.ಸಿ.ಫಾರ್ಮ್ ಸೇರಿದಂತೆ, ರಾಜ್ಯದ 14 ಕೃಷಿ ಸಂಶೋಧನಾ ಸಂಸ್ಥೆಗಳು ಮತ್ತು ಕೃಷಿ ವಿಶ್ವವಿದ್ಯಾಲಯಗಳು, ಅಧಿಕ ಇಳುವರಿ ಹಾಗೂ ರೋಗ ನಿರೋಧಕತೆಯುಳ್ಳ, ಭತ್ತದ ಸುಧಾರಿತ ತಳಿಗಳ ಅಭಿವೃದ್ಧಿಯಲ್ಲಿ, ನಿರತವಾಗಿವೆ. ಐದು ವರ್ಷಗಳ ಅವಧಿಯ ಈ ಸಂಶೋಧನೆಗೆ, 50 ಕೋಟಿ ರೂಪಾಯಿ ಮೀಸಲಿರಿಸಲಾಗಿದೆ.

<><><>

ಮಂಡ್ಯದ ವಿಶ್ವೇಶ್ವರಾಯ ಕೆನಲ್ ಫಾರ್ಮ್‌ನಲ್ಲಿ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ, ವಲಯ ಕೃಷಿ ಸಂಶೋಧನಾ ಕೇಂದ್ರ, 11 ಸಾವಿರದ 290 ವೈವಿಧ್ಯಮಯ ಭತ್ತದ ತಳಿಗಳನ್ನು ಉಳಿಸಿ, ಬೆಳೆಸುತ್ತಿದೆ. ವಿ.ಸಿ.ಫಾರ್ಮ್ ಸಂಶೋಧನಾ ಸಹ ನಿರ್ದೇಶಕ ಡಾಕ್ಟರ್ ಎನ್.ಶಿವಕುಮಾರ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಎನ್.ಶಿವಕುಮಾರ ಧ್ವನಿ 45 ಸೆಕೆಂದುಗಳು

<><><>

"ಬದಲಾಗುತ್ತಿರುವ ಪತ್ರಿಕಾ ಮಾಧ್ಯಮದ ಸ್ವರೂಪ" ಎಂಬ ವಿಷಯದಡಿ, ಇಂದು ರಾಷ್ಟ್ರೀಯ ಪತ್ರಿಕಾ ದಿನವನ್ನು, ಆಚರಿಸಲಾಗುತ್ತಿದೆ. ಈ ದಿನವನ್ನು ಪತ್ರಿಕೋದ್ಯಮದಲ್ಲಿ, ಪತ್ರಿಕಾ ಸ್ವಾತಂತ್ರ್ಯ ಮತ್ತು ನೈತಿಕತೆಯ ಸಂಕೇತವೆಂದು ಸ್ಮರಿಸಲಾಗುತ್ತದೆ. ಭಾರತದಲ್ಲಿ, ಪತ್ರಿಕಾ ಸ್ವಾತಂತ್ರ್ಯವನ್ನು ರಕ್ಷಿಸುವ ಉದ್ದೇಶಕ್ಕಾಗಿ, ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ, ಸ್ವಾಯತ್ತ ಅರೆ-ನ್ಯಾಯಾಂಗ ಶಾಸನಬದ್ಧ ಪ್ರಾಧಿಕಾರವಾಗಿ, 1966ರಲ್ಲಿ ಸಂಸತ್ತಿನ ಕಾಯ್ದೆ ಮೂಲಕ, ಸ್ಥಾಪಿತವಾಗಿದೆ. ಭಾರತದಲ್ಲಿ ಪತ್ರಿಕೆ ಮತ್ತು ಸುದ್ದಿ ಸಂಸ್ಥೆಗಳ ಗುಣಮಟ್ಟವನ್ನು ನಿರ್ವಹಿಸುವುದು ಮತ್ತು ಸುಧಾರಿಸುವುದು, ಮುಖ್ಯ ಉದ್ದೇಶವಾಗಿದೆ.

<><><>

ಕರ್ನಾಟಕ ಮಾಧ್ಯಮ ಅಕಾದೆಮಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಇಂದು ಬೆಂಗಳೂರಿನಲ್ಲಿ ವಿಶೇಷ ವಿಚಾರ ಸಂಕಿರಣ ಏರ್ಪಡಿಸಿದೆ ಎಂದು, ಅಕಾದೆಮಿಯ ಅಧ್ಯಕ್ಷೆ ಆಯೇಶಾ ಖಾನಂ, ತಿಳಿಸಿದ್ದಾರೆ.

<><><>

ಕನಕಶ್ರೀ ಪ್ರಶಸ್ತಿಗೆ ಬಳ್ಳಾರಿಯ ವ್ಯಾಸನಕೆರೆ ಪ್ರಭಂಜನಾಚಾರ್ಯ ಭಾಜನರಾಗಿದ್ದಾರೆ. ಕನಕದಾಸ ಜಯಂತಿ ಪ್ರಯುಕ್ತ ನೀಡಲಾಗುವ ಈ ಪ್ರಶಸ್ತಿ, 5 ಲಕ್ಷ ರೂಪಾಯಿ ನಗದು, ಕನಕದಾಸರ ಮುತ್ಥಳಿ ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರವೀಂದ್ರ ಕಲಾಕ್ಷೇತ್ರದಲ್ಲಿ, 18ನೇ ತಾರೀಖು, ಕನಕದಾಸ ಜಯಂತಿ ಸಮಾರಂಭದಲ್ಲಿ, ಈ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ ಎಂದು, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ.

<><><>

ಗಾನ ಗಂಧರ್ವ, ಪಂಡಿತ ಅರ್ಜುನಸಾ ನಾಕೋಡ, ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ವತಿಯಿಂದ, ಇಂದು ಸಂಜೆ ನಾಲ್ಕು ಗಂಟೆಗೆ, ಹುಬ್ಬಳ್ಳಿಯ ದೇಶಪಾಂಡೆ ನಗರದ, ಸವಾಯಿ ಗಂಧರ್ವ ಸಭಾ ಭವನದಲ್ಲಿ, 'ಸಂಗೀತ ಮಹೋತ್ಸವ–2024', ಆಯೋಜಿತವಾಗಿದೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಕಾರ್ಯಕ್ರಮವನ್ನು ಉದ್ಘಾಟಿಸುವರು. ಪಂಡಿತ ಜಯತೀರ್ಥ ಮೇವುಂಡಿ, ಉಸ್ತಾದ ಶಫೀಕ ಖಾನ್, ಪಂಡಿತ ಬಾಲಚಂದ್ರ ನಾಕೋಡ, ಉಸ್ತಾದ್ ರಫೀಕ ಖಾನ್ ಸೇರಿದಂತೆ, ಖ್ಯಾತ ಕಲಾವಿದರು, ಸಂಗೀತ ಕಛೇರಿ ನಡೆಸಲಿದ್ದಾರೆ.

<><><>

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಡಾಕ್ಟರ್ ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠದಲ್ಲಿ, 5 ಸಾವಿರ ಹಸ್ತಪ್ರತಿ ಕಟ್ಟುಗಳ ಡಿಜಿಟಲಿಕರಣ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಬೆಂಗಳೂರಿನ ಇ–ಸಾಹಿತ್ಯ ದಾಖಲೀಕರಣ ಕೇಂದ್ರ ಡಿಜಿಟಲಿಕರಣ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಉಪ ಕುಲಪತಿ ಬಿ.ಎಂ. ಪಾಟೀಲ, ಕುಲಸಚಿವ ಎ. ಚನ್ನಪ್ಪ ಹಾಗೂ ಮೌಲ್ಯಮಾಪನ ಕುಲಸಚಿವ ಎನ್.ವೈ. ಮಟ್ಟಿಹಾಳ, ಈ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ.

<><><>

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ, ನಾಡು–ನುಡಿಗೆ ಕೊಡುಗೆ ನೀಡಿದ, ಹಿರಿಯ ಜೀವಗಳ ಬದುಕು–ಸಾಧನೆ ಕುರಿತು, 'ಧರೆಗೆ ದೊಡ್ಡವರು' ಕಾರ್ಯಕ್ರಮದಡಿ, ಇಂದು ಬೆಳಗ್ಗೆ 10.30ಕ್ಕೆ, ಸಾಹಿತಿ ಡಾಕ್ಟರ್ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ ಬದುಕು–ಕೊಡುಗೆ ಕುರಿತು, ವಿಚಾರ ಸಂಕಿರಣ ಜರುಗಲಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಗದಗ ಜಿಲ್ಲೆ ಗಜೇಂದ್ರಗಡದಲ್ಲಿ, ನೂತನವಾಗಿ ನಿರ್ಮಿಸಿದ, ದಿವಾಣಿ ನ್ಯಾಯಾಲಯ ಕಟ್ಟಡದ ಶಂಕುಸ್ಥಾಪನೆಯನ್ನು, ಇಂದು ಬೆಳಗ್ಗೆ 9.30ಕ್ಕೆ, ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ವಿ.ಶ್ರೀಶಾನಂದ ನೆರವೇರಿಸಲಿದ್ದಾರೆ.

<><><>

ಕೊಡಗಿನ ಅರೆಕಾಡುವಿನಲ್ಲಿ, ಕೊಡವ ಸಾಹಿತ್ಯ ಅಕಾದೆಮಿ ಆಯೋಜಿಸಿದ, 'ನಾಡೊರ್ಮೆ' ಕಾರ್ಯಕ್ರಮಕ್ಕೆ, ಅಧ್ಯಕ್ಷ ಅಜ್ಜಿನಿಕಂಡ ಸಿ. ಮಹೇಶ್ ನಾಚಯ್ಯ, ಚಾಲನೆ ನೀಡಿದರು.

<><><>

ತುಮಕೂರು ಜಿಲ್ಲೆಯಲ್ಲಿ ಸಿರಿಧಾನ್ಯ ಬೆಳೆಯನ್ನು, 10 ಸಾವಿರ ಹೆಕ್ಟರ್ ಪ್ರದೇಶಕ್ಕೆ ವಿಸ್ತರಿಸುವ ಗುರಿ ಇದೆ ಎಂದು, ಜಿಲ್ಲಾಧಿಕಾರಿ ಸುಭಾ ಕಲ್ಯಾಣ್ ತಿಳಿಸಿದ್ದಾರೆ.

<><><>

ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆಯಲ್ಲಿ, ಇಂದು ಮತ್ತು ನಾಳೆ, ಫಲ ಪುಷ್ಪ ಪ್ರದರ್ಶನ ಹಾಗೂ ಸಿರಿಧಾನ್ಯ ಹಬ್ಬ ಆಯೋಜಿಸಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ವನವಾಸಿ ಬಂಧುಗಳಿಗೆ, ಗ್ರಿಡ್ ಮೂಲಕ, ಸೌರ ವಿದ್ಯುತ್ ವ್ಯವಸ್ಥೆ – ಎಚ್.ಡಿ. ಕುಮಾರಸ್ವಾಮಿ.
- ವಿಶೇ ` ಚೇತನ ಮಕ್ಕಳಿಗೆ, ಪ್ರವೇಶ ಪರೀಕ್ಷೆ ನಡೆಸದೇ, 6ನೇ ತರಗತಿಗೆ ದಾಖಲಾತಿ ನೀಡಲು, ಸೂಚನೆ – ದಾಸ್ ಸೂರ್ಯವಂಶಿ.
- ರಾಜ್ಯ ಲೋಕಾಯುಕ್ತದಲ್ಲಿ, 20 ಸಾವಿರ ಪ್ರಕರಣಗಳ ವಿಚಾರಣೆ ಬಾಕಿ – ನ್ಯಾಯಮೂರ್ತಿ ಬಿ. ವೀರಪ್ಪ.
- “ಬದಲಾಗುತ್ತಿರುವ ಪತ್ರಿಕಾ ಮಾಧ್ಯಮದ ಸ್ವರೂಪ”, ವಿಷಯದಡಿ, ಇಂದು ರಾಷ್ಟ್ರೀಯ ಪತ್ರಿಕಾ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ